ಹೀಗೊಂದು ಸಾರ್ಥಕ ಅಭಿನಂದನಾ ಕಾರ್ಯಕ್ರಮ

ಡಾ.ಸಿ.ಎನ್.ಮೃತ್ಯುಂಜಯಪ್ಪ ಅವರಿಗೆ ಅವರ ನಿವಾಸದಲ್ಲೇ ರೋಟರಿ ಸಂಸ್ಥೆ ವತಿಯಿಂದ ಅಭಿನಂದನೆ

ಮೈಸೂರು,ಮೇ ೧೩– ಸಂಜೆ ನೇಸರ ಪಡುವಣದಲ್ಲಿ ಜಾರುತ್ತಿದ್ದಂತೆ ಹಸಿರು ಮುಕ್ಕಳಿಸುತ್ತಿದ್ದ ಜಾಗವನ್ನು ಇರುಳಿನ ಸೆರಗು ನಿಧಾನವಾಗಿ ಆವರಿಸಿಕೊಳ್ಳುತ್ತಿತ್ತು. ಅಲ್ಲಿದ್ದವರ ಮನದಲ್ಲಿ ಸಂಭ್ರಮ ಪುಟಿದೇಳುತ್ತಿತ್ತು. ಮಾತುಗಳ ನಡುವೆಯೇ ಭಾವನೆಗಳು ಬಾಂಧವ್ಯವನ್ನು ಗಟ್ಟಿಗೊಳಿಸುತ್ತಿದ್ದಂತಹ ವಾತಾವರಣಕ್ಕೆ ತಲೆದೂಗಿ ಗಾಳಿ ಬೀಸುವ ಕರ್ತವ್ಯವನ್ನೂ ಮರೆತ ಗಿಡಮರಗಳೂ ಖುಷಿಯಿಂದ ಆಸ್ವಾದಿಸಿದ್ದವು. ಬಹುಶಃ ಅದಕ್ಕೇ ಅಲ್ಲಿ ಸ್ವಲ್ಪ ಧಗೆ ಇತ್ತು!

ಅಂತಹ ಸನ್ನಿವೇಶದಲ್ಲಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಸಸ್ಯಪ್ರೇಮಿ, ವೃಕ್ಷರಾಶಿಯ ಸಂರಕ್ಷಣೆ, ಕಸಿ ಮಾಡುವುದನ್ನೇ ನಿರಂತರವಾಗಿಸಿಕೊಂಡಿರುವ ಸಾಧಕರೊಬ್ಬರನ್ನು ಅಭಿನಂದಿಸಿದ ಸಂಸ್ಥೆ, ಅದಕ್ಕೆ ಸಾಕ್ಷಿಯಾದ ಅತಿಥಿ ಗಣ್ಯರ ಮನದಾಳದ ನುಡಿಗಳು ಬಂಡೆಯ ಮೇಲಿನಿಂದ ಜಲಪಾತದಂತೆ ಧುಮ್ಮಿಕ್ಕಿದವು. ಕೇಳುಗರು ಮೈಯೆಲ್ಲಾ ಕಿವಿಯಾದರು.

ಪರಿಸರ ರಕ್ಷಣೆಯನ್ನು ತಮ್ಮದೇ ರೀತಿಯಲ್ಲಿ ಕೈಗೊಂಡಿರುವ, ಮರಗಿಡಗಳ ಬಗ್ಗೆ ಮಕ್ಕಳ ಬಗೆಗಿನ ಕಾಳಜಿಯನ್ನು ಮೆರೆಯುವ ಮೂಲಕ ಕೇಂದ್ರ ಸರ್ಕಾರದ ಕೃಷಿ ಇಲಾಖೆ ಕೊಡ ಮಾಡುವ ಪ್ರತಿಷ್ಠಾನ ಪ್ಲಾಂಟ್ ಜಿನೋಂ ಸೇವಿಯರ್ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ನಗರದ ಶ್ರೀರಾಂಪುರ ನಿವಾಸಿ ಡಾ.ಸಿ.ಎನ್.ಮೃತ್ಯುಂಜಯಪ್ಪ ಅವರಿಗೆ ರೋಟರಿ ಮೈಸೂರು ಉತ್ತರ ಸಂಸ್ಥೆ ವತಿಯಿಂದ ಶುಕ್ರವಾರ ಅವರ ನಿವಾಸದಲ್ಲೇ ಹಮ್ಮಿಕೊಂಡಿದ್ದ ಅಭಿನಂದನೆ ಕಾರ್ಯಕ್ರಮದಲ್ಲಿ ಇಂತಹ ದೃಶ್ಯ ಸೃಷ್ಟಿಯಾಗಿತ್ತು. ಇಂತಹ ಆತ್ಮೀಯ ವಾತಾವರಣದಲ್ಲಿ ಮೃತ್ಯುಂಜಯಪ್ಪ ಮತ್ತು ಅವರ ಪತ್ನಿ ಸುಧಾ ಮೃತ್ಯುಂಜಯಪ್ಪ ಅವರನ್ನು ವಿಶಿಷ್ಟ ರೀತಿಯಲ್ಲಿ ಅಭಿನಂದಿಸಲಾಯಿತು.

ನಂತರ ಅಭಿನಂದನಾ ಭಾಷಣ ಮಾಡಿದ ರೋಟರಿ ಮಾಜಿ ಸಹಾಯಕ ಗವರ್ನರ್ ಗೊ.ರು.ಪರಮೇಶ್ವರಪ್ಪ ಅವರು, ಮೃತ್ಯುಂಜಯಪ್ಪ ಅವರು ವೃತ್ತಿಯಲ್ಲಿ ವೈದ್ಯರಾದರೂ ಮರಗಿಡಗಳ ರಕ್ಷಣೆಯ ಕಾಯಕವನ್ನು ೪೦ ವರ್ಷಗಳಿಂದ ಕೈಗೊಂಡಿದ್ದಾರೆ. ಅದಕ್ಕೆ ಅವರ ಪತ್ನಿ ಮತ್ತು ಮಕ್ಕಳ ಸಂಪೂರ್ಣ ಸಹಕಾರ ದೊರೆತಿರುವುದು ವಿಶೇಷ ಎಂದು ಹೇಳಿದರು. ಎಚ್.ಡಿ.ಕೋಟೆ ತಾಲ್ಲೂಕಿನ ಸರಗೂರಿನಲ್ಲಿ ನೆಲೆಸಿ ಗ್ರಾಮೀಣ ಜನರ, ಅದರಲ್ಲೂ ಗಿರಿಜನರಿಗೆ ಆರೋಗ್ಯ ಸೇವೆ ನೀಡುತ್ತಾ ಬಂದ ಮೃತ್ಯುಂಜಯಪ್ಪ ಕೇವಲ ೧ ರೂ., ೫೦ ಪೈಸೆ ಚಿಕಿತ್ಸಾ ವೆಚ್ಚ ಪಡೆದ ನಿದರ್ಶನಗಳೂ ಇವೆ. ಆದರೆ, ಅವರ ಮೂಲಬೇರು ಪರಿಸರ ಸಂರಕ್ಷಣೆಯಾಗಿತ್ತು. ಅದಕ್ಕಾಗಿ ವನಸಿರಿ ಎಂಬ ಸಂಘಟನೆಯನ್ನೂ ಸ್ಥಾಪಿಸಿದ್ದರು. ಸರಗೂರಿನ ಜೆಎಸ್‌ಎಸ್ ಶಾಲೆಯ ಆವರಣದಲ್ಲಿ ೧೧ ಸಾವಿರ ಟೀಕ್ ಮರಗಳನ್ನು ಬೆಳೆಸಿದ ಕೀರ್ತಿ ಅವರದ್ದಾಗಿದೆ. ಅದು ಸುತ್ತೂರು ಮಠಕ್ಕೆ ದೊಡ್ಡ ಆಸ್ತಿಯಾಗಿದೆ ಎಂದರು.

ಹಲವಾರು ಕೃತಿಗಳನ್ನು ರಚಿಸಿರುವ ಅವರು, 'ನನಗೆ ನಾನೇ ಶಿಲ್ಪಿ' ಎಂಬ ಆತ್ಮಕತೆಯನ್ನೂ ಬರೆದಿದ್ದಾರೆ. ಅದು ಇಂಗ್ಲಿಷ್ ಮತ್ತು ಹಿಂದಿ ಭಾಷೆಗೆ ಅನುವಾದವಾಗಿದೆ ಎಂದು ಪರಮೇಶ್ವರಪ್ಪ ತಿಳಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ 'ಅಂದೋಲನ' ದಿನಪತ್ರಿಕೆ ಸಂಪಾದಕ ರಾಜಶೇಖರ ಕೋಟಿ, ರೊ.ರಾಮಪ್ರಸಾದ್ ಮಾತನಾಡಿದರು. ರೋಟರಿ ಮೈಸೂರು ಉತ್ತರ ಅಧ್ಯಕ್ಷ ಮಹಾದೇವಪ್ಪ ಅಧ್ಯಕ್ಷತೆ ವಹಿಸಿದ್ದರು.

ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿ, ಎಂ.ಚಿನ್ನಸ್ವಾಮಿ, ಜಿ.ಶಿವಲಿಂಗಸ್ವಾಮಿ, ಎಂ.ಕೆ.ತಮ್ಮಯ್ಯ, ಟಿ.ಆರ್. ಹರೀಶ್, ಶಾರದಮ್ಮ, ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆರಂಭದಲ್ಲಿ ಶೈಲಾ ಸಿದ್ದರಾಮಪ್ಪ ಸುಶ್ರಾವ್ಯವಾಗಿ ವಚನಗಾಯನದಿಂದ ಕಾರ್ಯಕ್ರಮಕ್ಕೆ ಮೆರುಗು ತಂದು ಕೊಟ್ಟರು. ಕಾರ್ಯದರ್ಶಿ ಎಂ.ರಾಜೀವ್ ವಂದನೆ ಸಲ್ಲಿಸಿದರು.

ರೋಟರಿ ಮೈಸೂರು ಉತ್ತರ ಸಂಸ್ಥೆಯು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ಲಾಂಟ್ ಜಿನೋಂ ಸೇವಿಯರ್ ರಾಷ್ಟ್ರಪ್ರಶಸ್ತಿ ಪುರಸ್ಕೃತ ಡಾ.ಸಿ.ಎನ್.ಮೃತ್ಯುಂಜಯಪ್ಪ ಮತ್ತು ಅವರ ಪತ್ನಿ ಸುಧಾ ಮೃತ್ಯುಂಜಯಪ್ಪ ಅವರನ್ನು ಅಭಿನಂದಿಸಲಾಯಿತು. 'ಅಂದೋಲನ' ದಿನಪತ್ರಿಕೆ ಸಂಪಾದಕ ರಾಜಶೇಖರ ಕೋಟಿ, ರೋಟರಿ ಉತ್ತರ ಅಧ್ಯಕ್ಷ ಮಹಾದೇವಪ್ಪ, ಮಾಜಿ ಸಹಾಯಕ ಗೌರ್ನರ್ ಗೊ.ರು.ಪರಮೇಶ್ವರಪ್ಪ, ಕಾರ್ಯದರ್ಶಿ ರಾಜೀವ್, ಎಂ.ಕೆ.ತಮ್ಮಯ್ಯ ಮತ್ತಿತರರು ಚಿತ್ರದಲ್ಲಿದ್ದಾರೆ.

'ಮುಂದಿನ ಪೀಳಿಗೆಗೆ ಉಳಿಸಬೇಕಿದೆ ವನಸಿರಿ'

ಮೈಸೂರು: ಜಾಗತಿಕ ತಾಪಮಾನ ಏರುತ್ತಿರುವ ಈ ಸನ್ನಿವೇಶದಲ್ಲಿ ನಮ್ಮ ಮುಂದಿನ ಪೀಳಿಗೆಗೆ ವನಸಿರಿಯನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ. ಜಪಾನ್ ದೇಶದಲ್ಲಿ ದೊಡ್ಡ ದೊಡ್ಡ ಕಚೇರಿಗಳು, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಉದ್ಯೋಗದ ಸ್ಥಳಗಳಿಂದ ಹೊರಬರುತ್ತಿದ್ದಂತೆ ಮೊದಲು ಆಮ್ಲಜನಕ ಕೊಠಡಿಗಳಿಗೆ ಹೋಗಿ 'ಆಸಿರು' ಪಡೆದು ಹೊರಬರುತ್ತಿದ್ದಾರೆ. ಇಂತಹ ಸ್ಥಿತಿ ಭಾರತ, ಕರ್ನಾಟಕಕ್ಕೆ ಬರಬಾರದು ಎಂದು ವೃಕ್ಷಗಳ ಸಂರಕ್ಷಕ ಡಾ.ಸಿ.ಎನ್.ಮೃತ್ಯುಂಜಯಪ್ಪ ಎಚ್ಚರಿಸಿದರು.

ರೋಟರಿ ಉತ್ತರ ಕ್ಲಬ್‌ನವರ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಇಂತಹ ಸ್ಥಿತಿಯ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕಿದೆ. ಯಾವುದೇ ಗ್ರಾಮ ಪ್ರದೇಶದಲ್ಲಿ ಕಿನ್ನಾಳ ಶೇ.೩೩ ಅರಣ್ಯ ಇರಬೇಕು. ಈ ನಿಟ್ಟಿನಲ್ಲಿ ಮರಗಿಡಗಳನ್ನು ಬೆಳೆಸುವುದು ಅತ್ಯಗತ್ಯ. ರಸ್ತಾದಲ್ಲಿ ಕಾರ್ಖಾನೆ, ಸ್ಥಾವರಗಳ ಜಾಗದಲ್ಲಿ ಶೇ.೩೩ ಕಾಡು ಬೆಳೆಸುವಂತೆ ಕಾಯ್ದೆ ಮಾಡಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ ಕೂಡ ಅಂತಹ ಕಾನೂನು ಜಾರಿಯಾಗಬೇಕು ಎಂದ ಅವರು, ವೃಕ್ಷಗಳ ಸಂರಕ್ಷಣೆಯ ಹೋರಾಟದ ಹಾದಿಯನ್ನು ಅತ್ಯಂತ ಹೃದ್ಯವಾಗಿ ವಿವರಿಸಿದರಲ್ಲದೆ, ತಮ್ಮನ್ನು ತಮ್ಮ ಮನೆಯಲ್ಲೇ ಅಭಿನಂದಿಸಿದ ರೋಟರಿ ಉತ್ತರ ವಲಯದ ಪದಾಧಿಕಾರಿಗಳು, ಸದಸ್ಯರಿಗೆ ಅಭಿಮಾನ ಪೂರ್ವಕವಾಗಿ ಕೃತಜ್ಞತೆ ಸಲ್ಲಿಸಿದರು.

ಡಾ.ಸಿ.ಎನ್.ಮೃತ್ಯುಂಜಯಪ್ಪ ಅವರ ಪರಿಸರ ಸಂರಕ್ಷಣೆಯ ಕೆಲಸವನ್ನು ಕೇಂದ್ರ ಸರ್ಕಾರ ಗುರುತಿಸಿದೆ. ಆದರೆ, ರಾಜ್ಯ ಸರ್ಕಾರ ಏನು ಮಾಡುತ್ತಿದೆ? ಈ ಬಗ್ಗೆ ಸರ್ಕಾರದ ಗಮನ ಸೆಳೆಯುವ ಅಗತ್ಯವಿದೆ. ಮೃತ್ಯುಂಜಯಪ್ಪ ಅವರಿಗೆ ಪ್ರಶಸ್ತಿ ಸಿಕ್ಕಿದರೆ, ಅದರ ಹಣವನ್ನು ಸಮಾಜಕ್ಕೆ ಉಪಯೋಗಿಸುತ್ತಾರೆ ಎಂಬ ಸ್ವಾರ್ಥ ನನ್ನದಾಗಿದೆ.

-ರಾಜಶೇಖರ ಕೋಟಿ

'ಪ್ರಶಸ್ತಿ ಹಣದ ಕೊಡುಗೆ ಹೃದಯವಂತಿಕೆ ಕಾರ್ಯ'

ಮೈಸೂರು: ಡಾ.ಮೃತ್ಯುಂಜಯಪ್ಪ ಅವರಿಗೆ ಪ್ರಶಸ್ತಿ ಬಂದಿದೆ. ಅದರ ಜೊತೆಗೆ ೧.೫೦ ಲಕ್ಷ ರೂ. ಕೂಡ ಅವರಿಗೆ ಸಂದಿತ್ತು. ಅದನ್ನು ಅವರು ಬಳಸಿದ ರೀತಿ ಅತ್ಯಂತ ಹೃದಯವಂತಿಕೆಯ ಕಾರ್ಯವಾಗಿದೆ ಎಂದು 'ಅಂದೋಲನ' ದಿನಪತ್ರಿಕೆ ಸಂಪಾದಕ ರಾಜಶೇಖರ ಕೋಟಿ ಅಭಿಪ್ರಾಯಪಟ್ಟರು.

ಡಾ.ಸಿ.ಎನ್.ಮೃತ್ಯುಂಜಯಪ್ಪ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬಡಕೃಷಿಕ, ಪರಿಸರ ರಕ್ಷಕ ಎಡ್ಡರ್ ರೆಬೆಲ್ಲೋರನ್ನು ಕರೆಸಿಕೊಂಡು ೧ ಲಕ್ಷ ರೂ. ಕೊಡುಗೆ ನೀಡಿದ್ದಾರೆ. ಇಲ್ಲಿ ಜಾತಿ, ಧರ್ಮವನ್ನು ಅವರು ಮೀರಿದ್ದು ಪ್ರಶಂಸನೀಯ. ಉಳಿದ ೫೦ ಸಾವಿರ ರೂ.ಗಳನ್ನು ಮಕ್ಕಳ ಮೂಲಕ ಮರಗಳನ್ನು ಸಂರಕ್ಷಣೆ ಕೆಲಸ ಮಾಡುತ್ತಿರುವ ನಗರದ ಸಾಯಿ ಸಂಸ್ಥೆಗೆ ನೀಡಿದ್ದಾರೆ. ಆ ಮೂಲಕ ಪ್ಲಾಂಟ್ ಜಿನೋಂ ಸೇವಿಯರ್ ಪ್ರಶಸ್ತಿಯನ್ನು ಬೆಲೆ ಕಟ್ಟಲಾಗದ ಎತ್ತರಕ್ಕೆ ಏರಿಸಿದ್ದಾರೆ ಎಂದರು.

ಮೃತ್ಯುಂಜಯಪ್ಪ ಅವರಿಗೆ ಮೂವರು ಪುತ್ರಿಯರಾದ್ದಾರೆ. ಮೂವರೂ ಸಾಫ್ಟ್‌ವೇರ್ ಇಂಜಿನಿಯರ್‌ಗಳು. ಅವರಿಗೆ ಸುತ್ತೂರಿನಲ್ಲಿ ವಚನ ಮಾಂಗಲ್ಯದ ಮೂಲಕ ಅತ್ಯಂತ ಸರಳವಾಗಿ ವಿವಾಹ ಮಾಡಿದ್ದಾರೆ. ಮಕ್ಕಳ ಮದುವೆಗೆ ಮಾಡಬಹುದಾಗಿದ್ದ ಖರ್ಚಿನ ಹಣವನ್ನು ಸುತ್ತೂರಿನಲ್ಲಿರುವ ಜೆಎಸ್‌ಎಸ್ ಉಚಿತ ವಸತಿ ಶಾಲೆಗೆ ದೇಣಿಗೆ ನೀಡಿದ್ದಾರೆ. ಕಿರಿಯ ಪುತ್ರನ ಮದುವೆಯ ಸಂದರ್ಭದಲ್ಲಿ ಉಳಿಸಿದ ೫ ಲಕ್ಷ ರೂ.ಗಳನ್ನು ಶಾಲೆಗೆ ನೀಡಿದ್ದನ್ನು ನಾನೇ ಸ್ವತಃ ನೋಡಿದ್ದೇನೆ. ಇನ್ನಿಬ್ಬರ ಮಕ್ಕಳ ಮದುವೆ ಸಮಯದಲ್ಲೂ ಕೊಡುಗೆ ನೀಡಿದ್ದಾರೆ ಎಂದು ಅವರು ಹೇಳಿದರು.

ಇನ್ನು ವಿವಿಧ ಬಗೆಯ ಹಣ್ಣಿನ ಗಿಡ, ಮರಗಳನ್ನು ಬೆಳೆಸಿರುವ ಮೃತ್ಯುಂಜಯಪ್ಪ ಅವರು, ಒಂದೇ ಮಾವಿನ ಮರದಲ್ಲಿ ೧೧೦ ಬಗೆಯ ತಳಿಗಳ ಹಣ್ಣುಗಳನ್ನು ಕಸಿ ಮೂಲಕ ಸಾಧಿಸಿದ್ದಾರೆ ಎಂದ ಅವರು, ಮೃತ್ಯುಂಜಯಪ್ಪ ಅವರು ನನ್ನ ಪತ್ರಿಕೆಗೂ ಆರಂಭದ ಸಂದರ್ಭದಲ್ಲಿ ನೀಡಿದ ನೆರವನ್ನು ಎಂದೂ ಮರೆಯಲಾರೆ ಎಂದು ಸ್ಮರಿಸಿದರು.

ನಿಧನ ವಾರ್ತೆ

ಕೆ.ಆರ್.ನಗರದ ಪುಷ್ಪಾ



ಕೆ.ಆರ್.ನಗರ,ಮೇ ೧೩– ತಾಲ್ಲೂಕು ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ, ತಾಲ್ಲೂಕು ಒಕ್ಕಲಿಗ ಸಂಘದ ಉಪಾಧ್ಯಕ್ಷ ಹೆಬ್ಬಾಳು ಪರಶುರಾಮ್ ಅವರ ಪತ್ನಿ ಪುಷ್ಪಾ(೫೬) ಶನಿವಾರ ನಿಧನರಾದರು.

ಇವರು ಮಾಜಿ ಸಚಿವ ಎಸ್.ನಂಜಪ್ಪ ಅವರ ನಾದಿನಿ. ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಶನಿವಾರ ನೆರವೇರಿತು.

ಸಂತಾಪ: ಶಾಸಕರಾದ ಸಾ.ರಾ.ಮಹೇಶ್, ಜಿ.ಟಿ.ದೇವೆಗೌಡ, ಮಾಜಿ ಸಂಸದ ಎ.ಎಚ್.ವಿಶ್ವನಾಥ್, ದೊಡ್ಡಸ್ವಾಮಿ ಗೌಡ, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ತಮ್ಮನಾಯಕ್, ಕೆ.ಎಲ್.ಕುಮಾರ್, ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಆಣ್ಣೇಗೌಡ, ಬಿಜಾಂಚಿ ಎಚ್.ಪಿ.ಶಿವಣ್ಣ, ಎಂ.ಕೆ.ಮಹದೇವ್, ಎಸ್.ಪಿ.ತಮ್ಮಯ್ಯ ಸಂತಾಪ ವ್ಯಕ್ತಾಪಡಿಸಿದ್ದಾರೆ.

ಉದ್ಬೂರು ಸಿದ್ದನಾಯಕ

ಮೈಸೂರು,ಮೇ ೧೩– ಉದ್ಬೂರು ಅಭಿರುಚಿ ಗಣೇಶ್ ಅವರ ತಾತ ಜಾನಪದ ಕಥೆಗಾರ ಸಿದ್ದನಾಯಕ(೯೨) ಮೇ ೧೩ರಂದು ನಿಧನರಾದರು.

ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಭಾನುವಾರ ಉದ್ಬೂರು ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಜೆ.ಪಿ.ನಗರದ ಡಿ.ಚಂದ್ರಕಲಾ

ಮೈಸೂರು,ಮೇ ೧೩– ಜೆ.ಪಿ.ನಗರದ ನಿವಾಸಿ ಡಿ.ಚಂದ್ರಕಲಾ(೪೯) ಮೇ ೧೨ರಂದು ನಿಧನರಾದರು.

ಪತಿ ಕೃಷ್ಣಮೂರ್ತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ನೆರವೇರಿತು.

ದೇಶ/ವಿದೇಶ

ನೇಪಾಳ: ೨೦ ವರ್ಷಗಳ ನಂತರ ಸ್ಥಳೀಯ ಸಂಸ್ಥೆ ಚುನಾವಣೆ

ಕಠ್ಮಂಡು,ಮೇ ೧೩– ನೇಪಾಳದಲ್ಲಿ ೨೦ ವರ್ಷಗಳ ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿದ್ದು, ಅಂತಿಮ ಹಂತದ ಸಿದ್ಧತೆ ಪೂರ್ಣಗೊಂಡಿದೆ. ೧೫ಕ್ಕೂ ಹೆಚ್ಚು ವರ್ಷಗಳಿಂದ ಸ್ಥಳೀಯ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳಿಲ್ಲದೆ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟಾಗಿದೆ. ಮೇ ೧೪ ಮತ್ತು ಜೂನ್ ೧೪ರಂದು ೨ ಹಂತದ ಚುನಾವಣೆ ನಡೆಯಲಿದೆ. ೧೯೯೭ರ ನಂತರದಲ್ಲಿ ಮಾವೋವಾದಿಗಳ ಬಂಡಾಯದಿಂದಾಗಿ ನೇಪಾಳದಲ್ಲಿ ಅಸ್ಥಿರತೆ ಉಂಟಾಗಿತ್ತು. ೫ ವರ್ಷಗಳಿಗೊಮ್ಮೆ ನಡೆಯಬೇಕಿದ್ದ ಚುನಾವಣೆಗೆ ಅಡ್ಡಿಯಾಗಿತ್ತು. ಇದೀಗ ೨೦ ವರ್ಷಗಳ ಬಳಿಕ ಚುನಾವಣೆ ನಡೆಯುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಸುಲಲಿತವಾಗಿ ಸಾಗಲು ಭಾನುವಾರದ ಸ್ಥಳೀಯ ಚುನಾವಣೆ ಪ್ರಮುಖವಾಗಿದೆ. ಮೊದಲ ಹಂತದ ಚುನಾವಣೆಯಲ್ಲಿ ೪೯ ಲಕ್ಷ ಮತದಾರರು ಮತದಾನ ಮಾಡಲು ಅರ್ಹರಾಗಿದ್ದಾರೆ.

'ಎಲ್‌ಇಟಿ' ಮೇಲೆ ದಾಳಿ: ವಿಶೇಷ ಪೊಲೀಸ್ ಅಧಿಕಾರಿ ಸೇರಿ ೭ ಮಂದಿ ಬಂಧನ

ಹೊಸದಿಲ್ಲಿ,ಮೇ ೧೩– ಜಮ್ಮು ಮತ್ತು ಕಾಶ್ಮೀರದ ಡೋಡಾ ಜಿಲ್ಲೆಯಲ್ಲಿ ಲಷ್ಕರ್ ಎ ತೊಯ್ಬಾ(ಎಲ್‌ಇಟಿ) ಉಗ್ರ ಸಂಘಟನೆ ಮೇಲೆ ಪೊಲೀಸರು ದಾಳಿ ನಡೆಸಿದ್ದು, ವಿಶೇಷ ಪೊಲೀಸ್ ಅಧಿಕಾರಿ ಸೇರಿದಂತೆ ೭ ಮಂದಿಯನ್ನು ಬಂಧಿಸಿದ್ದಾರೆ. ಚೀನಾದ್ ಕಣಿವೆ ಪ್ರದೇಶದಲ್ಲಿ ಮತ್ತೆ ಉಗ್ರ ಚಟುವಟಿಕೆ ಪ್ರಾರಂಭಿಸಲು ಹವಣಿಸುತ್ತಿದ್ದ ಎಲ್‌ಇಟಿ ಉಗ್ರರ ಸಂಘಟನೆ ಮೇಲೆ ಶನಿವಾರ ಜಮ್ಮು ಮತ್ತು ಕಾಶ್ಮೀರದ ಪೊಲೀಸರು ದಾಳಿ ನಡೆಸಿ ಎಕೆ ೪೭ ಸೇರಿದಂತೆ ಇತರೆ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ. ಉಗ್ರರಿಗೆ ಸಹಕರಿಸುತ್ತಿದ್ದ ಪೊಲೀಸ್ ಇಲಾಖೆಯ ವಿಶೇಷ ಪೊಲೀಸ್ ಅಧಿಕಾರಿ, ಸೇನೆಯ ಮಾಜಿ ಸಿಬ್ಬಂದಿ ಹಾಗೂ ಇತರೆ ಐವರು ಉಗ್ರರನ್ನು ಬಂಧಿಸಲಾಗಿದೆ. ಪೊಲೀಸರ ಕಾರ್ಯಾಚರಣೆ ಕುರಿತು ಜಮ್ಮು ವಲಯದ ಪೊಲೀಸ್ ಮಹಾನಿರ್ದೇಶಕ ಡಾ.ಎಸ್.ಡಿ.ಸಿಂಗ್ ಮಾಹಿತಿ ನೀಡಿದ್ದಾರೆ. ಮೇ ೮ರಂದು ಡೋಡಾ ಪೊಲೀಸ್ ಚೌಕದ ಮೇಲೆ ಉಗ್ರರು ನಡೆಸಿದ್ದ ದಾಳಿಯಲ್ಲಿ ವಿಶೇಷ ಪೊಲೀಸ್ ಅಧಿಕಾರಿ ಹತ್ಯೆಯಾಗಿತ್ತು ಹಾಗೂ ಮತ್ತೊಬ್ಬ ಅಧಿಕಾರಿ ಗಾಯಗೊಂಡಿದ್ದರು. ಭದ್ರತಾ ಪಡೆಗಳು ದೇಶದೊಳಗೆ ಅಡಗಿರುವ ಉಗ್ರರ ಹುಡುಕಾಟ ನಡೆಸಿವೆ.

ಹುತಾತ್ಮ ಯೋಧರ ಕುಟುಂಬಗಳಿಗೆ ೨೫ ವಸತಿ ಗೃಹ ದಾನ

ಹೊಸದಿಲ್ಲಿ,ಮೇ ೧೩– ನಕ್ಸಲ್ ದಾಳಿಯ ವೇಳೆ ಕರ್ತವ್ಯ ನಿರತರಾಗಿ ಹುತಾತ್ಮರಾದ ಸಿಆರ್‌ಪಿಎಫ್‌ನ ಯೋಧರ ಕುಟುಂಬಗಳಿಗೆ ೨೫ ವಸತಿ ಗೃಹಗಳನ್ನು(ಫ್ಲಾಟ್) ಉಚಿತವಾಗಿ ನೀಡುವುದಾಗಿ ಬಾಲಿವುಡ್ ನಟ ವಿವೇಕ್ ಒಬೆರಾಯ್ ಹೇಳಿದ್ದಾರೆ. 'ಮಹಾರಾಷ್ಟ್ರದ ಥಾಣೆ ಪ್ರದೇಶದ ತಮ್ಮ ಜಮೀನಿನಲ್ಲಿ ವಸತಿಗೃಹಗಳನ್ನು ನಿರ್ಮಿಸಲಾಗಿದ್ದು, ಅವುಗಳನ್ನು ಮೃತ ಯೋಧರ ಕುಟುಂಬಗಳಿಗೆ ವಿತರಿಸಲಾಗಿದೆ' ಎಂದು ವಿವೇಕ್ ಒಬೆರಾಯ್ ತಿಳಿಸಿದ್ದಾರೆ. ಮಾ.೧೧ರಂದು ಸುಕ್ಮಾದಲ್ಲಿ ನಡೆದ ನಕ್ಸಲ್ ದಾಳಿ ವೇಳೆ ಕರ್ತವ್ಯ ನಿರತ ೧೨ ಯೋಧರು ಮೃತಪಟ್ಟಿದ್ದರು. ಅದರಲ್ಲಿ ೩ ಕುಟುಂಬಗಳಿಗೆ ಈಗಾಗಲೇ ೪ ವಸತಿ ಗೃಹಗಳನ್ನು ನಿಗದಿಪಡಿಸಲಾಗಿದ್ದು, ಉಳಿದ ೨೧ ವಸತಿಗೃಹಗಳನ್ನು ಅರೆ ಸೈನಿಕ ಪಡೆ ಯೋಧರಿಗೆ ಹಂಚಿಲಾಗುವುದು ಎಂದು ಸಿಆರ್‌ಪಿಎಫ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಯೋಧರ ಕುಟುಂಬಗಳಿಗೆ ೨೫ ವಸತಿಗೃಹಗಳನ್ನು ದಾನ ಮಾಡಿದ ನಟ ವಿವೇಕ್ ಒಬೆರಾಯ್ ಅವರಿಗೆ ಸಿಆರ್‌ಪಿಎಫ್ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಧನ್ಯವಾದ ತಿಳಿಸಿದೆ.



ಯೋಧರ ಕುಟುಂಬಗಳಿಗೆ ದೇಣಿಗೆ ನೀಡಲು ಇಚ್ಛಿಸುವವರಿಗೆ ಮಾಹಿತಿ ನೀಡಲು ಅನುಕೂಲವಾಗಲು ಕೇಂದ್ರ ಗೃಹ ಸಚಿವಾಲಯ ಹೊಸ ವೆಬ್‌ಸೈಟ್ ಪ್ರಾರಂಭಿಸಿದೆ. www.bharatkeve